
ಸ್ಥಳೀಯತೆಯ ಬಹುರೂಪತೆ, ವಸ್ತು ಮತ್ತು ಭಾಷೆಯ ದೃಷ್ಟಿಯಿಂದ ಸಾಕಷ್ಟು ಗಟ್ಟಿಯಾಗಿಯೇ ಇತ್ತು. ಇದಕ್ಕೆ ನಿದರ್ಶನವಾಗಿ ಪಂಜೆ, ಮಾಸ್ತಿ, ಕುವೆಂಪು, ಸೇಡಿಯಾಪು, ಕಡೆಂಗೋಡ್ಲು, ಕೋರಡ್ಕಲ್ ಶ್ರೀನಿವಾಸರಾಯರು, ಭಾರತೀಪ್ರಿಯ, ಕೆರೂರು, ಬಾಗಲೋಡಿ ದೇವರಾಯ, ಅಶ್ವತ್ಥ ಮುಂತಾದ ಲೇಖಕರ ಕಥೆಗಳಲ್ಲಿ ಬರುವ ಭಾಷೆಯ ವೈವಿಧ್ಯ ಮತ್ತು ವಸ್ತುವಿನ ವಿಸ್ತಾರವನ್ನು ಗಮನಿಸಬಹುದು.

ಮೇಲಿನ ಕೆಲವು ಕಥೆಗಾರರ ಕಥೆಗಳನ್ನು ಸ್ಥಳೀಯತೆಗಳ ದೃಷ್ಟಿಯಿಂದ ಕೊಂಚ ವಿಸ್ತರಿಸಬಹುದು. ಕೊರಡ್ಕಲ್ ಅವರ 'ಧಣಿಯರ ಸತ್ಯನಾರಾಯಣ' ಮತ್ತು ಭಾರತೀಪ್ರಿಯರ 'ಮೋಚಿ' ಕಥೆಗಳು ತನ್ನ ಕೇಂದ್ರ ವಸ್ತುವಿನ ದೃಷ್ಟಿಯಿಂದ ಈಗ ಹೆಚ್ಚು ಚರ್ಚೆಗೆ ಮುನ್ನೆಲೆಗೆ ಬಂದಿರುವ ದಲಿತವರ್ಗದ್ದೇ ಆಗಿವೆ. ಸ್ಥಳೀಯತೆಯ ದೃಷ್ಟಿಯಿಂದ ಮತ್ತು ಕಥೆಯ ಕಲಾತ್ಮಕತೆ, ವಸ್ತುವಿನ ಬಿಗಿತನ, ಮಾನಸಿಕ ಒಳಸಿಟ್ಟು, ಭೂಮಿಯ ಹಕ್ಕುಗಳು, ನಿಸರ್ಗದ ಒಡೆತನ ಮತ್ತು ಮುಕ್ತತೆಗೆ ಅಂಟಿಕೊಂಡಿರುವ ಹುಡುಗರ ಮುಗ್ಧತೆ ಎಲ್ಲದರ ನಿಟ್ಟಿನಲ್ಲೂ 'ಮೋಚಿ' ಕಥೆಯನ್ನು 'ಧಣಿಯರ ಸತ್ಯನಾರಾಯಣ' ಮೀರಿಸಿದೆ. ಮೇಲುನೋಟಕ್ಕೆ 'ಧಣಿಯರ ಸತ್ಯನಾರಾಯಣ' ಪ್ರಗತಿಶೀಲತೆಯ ಸ್ಪರ್ಶವನ್ನು ಪಡೆದಂತೆ ಕಂಡರೂ, ಅಲ್ಲಿ ಅಸಮಾನತೆಯ ವಿಚಿತ್ರವಾದ ಕರ್ಷಣೆಗಳಿವೆ; ಸ್ವ ಮತ್ತು ಸಾಮಾಜಿಕ ಸಂಘರ್ಷಗಳು ತಕ್ಕಮಟ್ಟಿಗಾದರೂ ಜಾಗಪಡೆದಿವೆ. 'ಮೋಚಿ' ತೀರ 'ಸಹಾನುಭೂತಿಯ' ಮತ್ತು 'ಆದರ್ಶಪ್ರಿಯತೆ'ಯ ಒತ್ತಡದಿಂದ ಮಾಸ್ತಿ ಮಾದರಿಗೆ ತಿರುಗಿಬಿಡುತ್ತೆ. ಅಂದರೆ, ಅನುಭವವನ್ನು ಕೇವಲ

'ಹೇಳುತ್ತದೆ'. ಓದುಗನನ್ನು ಚಕಿತಗೊಳಿಸಲಾರದು. ಇದೇ ಹಾದಿಗೆ ಸೇರುವ ಟೇಂಗ್ಸೆ ಗೋವಿಂದರಾವ್ ಅವರ 'ಛಪ್ಪರ್ ಬಂದ್' ಕತೆ ಕೊಂಚ ಹೊತ್ತು ನಮ್ಮನ್ನು ಚಿಂತನೆಗೆ ದೂಡುತ್ತದೆ. ಈ ಕಥೆ ಪ್ರಗತಿಶೀಲ ಬರುವುದಕ್ಕೆ ಮೊದಲೇ ಮೂವತ್ತರ ದಶಕದಲ್ಲೇ ಪ್ರಕಟಗೊಂಡಿತ್ತು. ಧಾರವಾಡದ ಸುತ್ತಮುತ್ತ ಇರುವ ಕ್ರಿಮಿನಲ್ ಜಾತಿಯನ್ನು 'ಛಪ್ಪರ್ ಬಂದ್' ಎಂದು ಕರೆಯಲಾಗುತ್ತದೆ. ಇದರ ಸುತ್ತ ಈ ಕಥೆ ನಡೆಯುತ್ತದೆ. ಕಥೆಯ ರಚನೆಯ ಕುರಿತು ನಾವೇನೇ



ಪ್ರಶ್ನೆಗಳನ್ನು ಎತ್ತಿದರೂ, ಇಂಥ ಜಾತಿಯನ್ನು ಕೇಂದ್ರ ವಸ್ತುವನ್ನಾಗಿ ಮಾಡಿಕೊಂಡು ಕಥೆ ಹೇಳಿದ್ದು ಪ್ರಧಾನ ಸಂಗತಿ. ಚಾರಿತ್ರಿಕ ದೃಷ್ಟಿಯಿಂದ ಈ ಮೂರು ಕಥೆಗಳೂ ಮುಖ್ಯವೇ.

ಮಾಸ್ತಿಯವರು ಸಣ್ಣಕಥೆಗಳ ಸ್ವರೂಪಕ್ಕೆ ದೊಡ್ಡ ಚೌಕಟ್ಟನ್ನು ಒದಗಿಸಿದರೂ ಚಾರಿತ್ರಿಕವಾಗಿ ಪಂಜೆಯವರನ್ನು ಆರಂಭದ ಕಥೆಗಾರ ಎಂದು ಗುರುತಿಸಲಾಗುತ್ತದೆ. ವಾಸ್ತವವಾಗಿ ಪಂಜೆಯವರೇ ಕನ್ನಡದ ಮೊದಲ ಕಥೆಗಾರರು. ಸಾಂಸ್ಕೃತಿಕ ರಾಜಕಾರಣದಿಂದ ಈ ವಿಚಾರವನ್ನು ಇನ್ನೂ ಮುಚ್ಚಿಡಲಾಗುತ್ತಿದೆ. ಪಂಜೆ, ಕಡೆಂಗೋಂಡ್ಲು, ಸೇಡಿಯಾಪು, ಪಡುಕೋಣೆ ರಮಾನಂದರಾಯರು, ಬಾಗಲೋಡಿ ದೇವರಾಯ ಮುಂತಾದವರು ಮಾಸ್ತಿಯವರಿಗಿಂತ ಹೇಗೆ ಭಿನ್ನ ಎಂಬುದು ಸಾಕಷ್ಟು ಚರ್ಚೆಯಾಗಬೇಕಾಗಿದೆ. ಇಲ್ಲಿ ಸ್ವಲ್ಪ ಮಟ್ಟಿಗೆ ವಸ್ತು, ಸ್ಥಳೀಯತೆ ಮತ್ತು ಭಾಷಿಕ ಕಲಾತ್ಮಕತೆ ದೃಷ್ಟಿಯಿಂದ ಹೇಳವುದಾದರೆ, 'ನನ್ನ ಚಿಕ್ಕ ತಂದೆಯ ಉಯಿಲು', 'ಕಮಲಾಪುರದ ಹೋಟ್ಲಿನಲ್ಲಿ', 'ಅದ್ದಿಟ್ಟು', 'ಹೊಡೆಯುವ ಗಡಿಯಾರ', 'ನಾಗರಬೆತ್ತ', 'ಬಾಳ್ವೆಯ ಮಸಾಲೆ', 'ಕೊಡೆಯ ವಿಚಾರ', 'ಹುಚ್ಚು ಮುನಸೀಫ', 'ಘಟಭಾಂಡೇಶ್ವರ' ಮುಂತಾದ ಕಥೆಗಳ ಹಿನ್ನಲೆಯಲ್ಲಿ ಗಮನಿಸಿದರೆ ಸಾಕು. ಅಥವಾ, ಇನ್ನೂ ಕೆಲವು ಕಥೆಗಳಲ್ಲಿ ವಸಾಹತು ಪರಿಣಾಮಗಳು